

ಸೈನಿಕರೊಂದಿಗೆ ನಾಗರಿಕರ ಮುಖಾಮುಖಿ



ರಸ್ತೆ ಮಾರ್ಗಕ್ಕಿಂತ ಹೊಲ ಗದ್ದೆಗಳ ಹಾದಿ ಇವರಿಗೆ ಸುರಕ್ಷಿತ

ಮಾಡಿದ್ದೆವು. ಆದರೂ ಅಪಾಯದ ಭಯ ಇದ್ದೇ ಇತ್ತು. ಒಂದರ ಹಿಂದೆ ಒಂದು ಸಾಲಾಗಿ ಹೋಗಿ ಮಣ್ಣಿನ ದೊಡ್ಡ ಮನೆ ಮುಂದೆ ಸೇರಿದೆವು.

ಹೋಗುವಷ್ಟರಲ್ಲಿ ಸಂಜೆ ಆಗಿತ್ತು. ಭರ್ಜರಿ ಭೋಜನದ ಘಮ ಮೂಗಿಗೆ ಬಡಿದಿತ್ತು. ನಾನು ಶುದ್ಧ ಸಸ್ಯಾಹಾರಿ. ಅಲ್ಲಿ ಮಾಂಸಾಹಾರವೇ ಜಾಸ್ತಿ. ಅವರು ತಿನ್ನುವ ಬಗೆಯೂ ಕಣ್ಣು ತುಂಬಿಕೊಳ್ಳುವಂತೆ ಇತ್ತು. ಅಫ್ಗಾನಿ ಸೇನೆ, ಅಮೆರಿಕ ಸೇನೆ, ಸ್ಥಳೀಯ ಪ್ರಮುಖರು ಔತಣಕೂಟಕ್ಕೆ ಸೇರಿದ್ದರು. ಅವರು ಊಟಮಾಡುವ ಬಗೆಯೂ ಭಿನ್ನ. ದೊಡ್ಡ ಜಮಖಾನವನ್ನು ನೆಲದ ಮೇಲೆ ಹಾಸಿದರು. ಅದರ ಮೇಲೆ ಸುಮಾರು 16 ಅಡಿ ವಿಸ್ತೀರ್ಣದ ದೊಡ್ಡ ಹರಿವಾಣವನ್ನು (ದೊಡ್ಡ ತಟ್ಟೆ) ಇಟ್ಟರು. ಅದರ ಸುತ್ತ, ಒಂದು ಕಡೆ ಅಫ್ಗಾನಿ ಸೇನೆ, ಮತ್ತೊಂದು ಕಡೆ ಅಮೆರಿಕ ಸೇನೆ ಮುಖಾಮುಖಿ ಕುಳಿತಿತು. ಬಕೆಟ್‌ನಲ್ಲಿ ಬಿರಿಯಾನಿ ತಂದು ಸುರಿದರು. ಉತ್ತರ ಭಾರತೀಯ ಮಾದರಿಯ ರೋಟಿಯನ್ನೂ ಕೊಟ್ಟರು. ಒಂದೇ ತಟ್ಟೆಯಲ್ಲಿ ಎಲ್ಲರೂ ತಿನ್ನುವ ರೀತಿಯನ್ನು 'ಬ್ರದರ್ ಹುಡ್' ಎಂದು ಕರೆಯುತ್ತಾರೆ. ಒಟ್ಟಿಗೆ ಊಟ ಮಾಡುವುದು ಪರಸ್ಪರರು ಸಹೋದರರು. ಉಭಯತ್ರರಲ್ಲಿ ನಂಬಿಕೆ ಇದೆ ಎನ್ನುವ ವಿಶ್ವಾಸವನ್ನು ಅದು ಮೂಡಿಸುತ್ತದೆ ಎಂಬ ನಂಬಿಕೆ ಅವರದು. ನನ್ನನ್ನು ಆ ಗ್ರಾಮಸ್ಥರಿಗೆ 'ಭಾರತೀಯ ಪತ್ರಕರ್ತ' ಎಂದು ಪರಿಚಯಿಸಲಾಯಿತು. ನನ್ನ ಊಟದ ಪದ್ಧತಿ ಕೇಳಿ 'ಅಯ್ಯೋ ಪಾಪ' ಎಂದು ಕನಿಕರದಿಂದ ಉದ್ಗರಿಸಿ, ದಾಳಿಂಬೆ ಸೇರಿದಂತೆ ಒಂದಷ್ಟು ಹಣ್ಣು ತಂದುಕೊಟ್ಟರು. ಹಣ್ಣಿನ ಜೊತೆ ರೋಟಿಯನ್ನು ತಿಂದು, ಅಂದಿನ ರಸಗಳಿಗೆಗಳ ಸೆರೆಹಿಡಿದಿದ್ದೆ.

ಔತಣ ಮುಗಿಯುವ ವೇಳೆಗೆ ರಾತ್ರಿ ಹನ್ನೊಂದು ಗಂಟೆ ಆಗಿತ್ತು. ವಾಕಿಟಾಕಿಯಲ್ಲಿ ಒಂದು ಸಂದೇಶ ಬಂತು. ನಾವು ಇರುವ ಸ್ಥಳದಿಂದ ಸ್ವಲ್ಪ ದೂರದಲ್ಲೇ ಗುಂಪೊಂದು ಸೇರಿದೆ. ಅದು ನಾವು ನೆಲೆಸಿರುವ ತಾಣದತ್ತ ನುಸುಳಬಹುದು ಎಂಬ ಸಂದೇಹ ಆ ಸಂದೇಶದಲ್ಲಿತ್ತು. ಸೇನಾ ತುಕಡಿಯಲ್ಲಿ ಉಸ್ತುವಾರಿಯಲ್ಲಿ ಇದ್ದ ಸೈನಿಕರು ಆ ಗುಂಪನ್ನು ಡ್ರೋಣ್ ಮೂಲಕ ಪತ್ತೆಹಚ್ಚಿ ಕೂಡಲೇ ಮಾಹಿತಿ ರವಾನಿಸಿದ್ದರು. ತಕ್ಷಣವೇ ಎಲ್ಲರನ್ನೂ ಎಚ್ಚರಿಸಲಾಯಿತು. ಯಾರೂ ಮಾತನಾಡುವಂತಿಲ್ಲ. ಅವರು ಹೇಳುವವರೆಗೂ ನಾನು ಹೊರ ಹೋಗಬಾರದು. ಅಷ್ಟೇ ಏಕೆ, ಕುಳಿತ ಜಾಗದಿಂದ ಕದಲದಂತೆ ನಿರ್ಬಂಧ. ನನ್ನ ರಕ್ಷಣೆ ಅವರಿಗೆ ದೊಡ್ಡ ಜವಾಬ್ದಾರಿ. ನಾನು ಯುದ್ಧ ಸೈನಿಕನಲ್ಲ. ಒಬ್ಬ ಪತ್ರಕರ್ತ. ಆ ಸಂದರ್ಭದಲ್ಲಿ ನಮ್ಮಂತಹವರು ಅವರಿಗೆ ದೊಡ್ಡ ಹೊರೆಯಾಗುತ್ತೇವೆ. ಮನೆಯ ಮೇಲೆ ದಾಳಿ ನಡೆದರೂ ನನಗೆ ತೊಂದರೆ ಆಗದಂತೆ ಮೂಲೆಗೆ ಸೇರಿಸಿದರು. ನನ್ನ ಸುತ್ತ ಐದು ಮಂದಿ ಸೈನಿಕರೂ ಕುಳಿತರು. ಸನ್ನೆಯ ಮೂಲಕವೇ ಮಾತನಾಡುತ್ತಿದ್ದರು. ಒಬ್ಬರು ಮಾತ್ರ ವಾಕಿಟಾಕಿ ಮೂಲಕ ಸಂದೇಶವನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು.

ನಾವು ತಂಗಿದ್ದ ಮನೆಯಿಂದ 500 ಮೀಟರ್ ಅಷ್ಟು ದೂರಕ್ಕೆ ಗುಂಪು ಬಂದಿದೆ ಎನ್ನುವ ಸಂದೇಶ ಬಂತು. ತಕ್ಷಣವೇ ಸೈನಿಕರು ತಮ್ಮ ಹಣೆಯ ಹತ್ತಿರ ಹಾಕಿಕೊಂಡಿದ್ದ ಲೈಟ್ ಬಣ್ಣವನ್ನು ಬದಲಿಸಿದರು. ನಿರ್ಜನ ಪ್ರದೇಶ ಆಗಿದ್ದರಿಂದ ಓಡಾಡಲು ಅನುಕೂಲವಾಗಲಿ ಎಂದು ಟಾರ್ಚ್ ಅಳವಡಿಸಿಕೊಂಡಿದ್ದರು. ಎಚ್ಚರಿಕೆಯ ಸಂದೇಶ ಬಂದ ತಕ್ಷಣ ಆ ದೀಪಗಳನ್ನು ಕೆಂಪುಮಿಶ್ರ ಬಣ್ಣಕ್ಕೆ ತಿರುಗಿಸಲಾಯಿತು. ವಿರೋಧಿಗಳ ಬಳಿ ಇದ್ದಿರಬಹುದಾದ ಇನ್‌ಫ್ರಾರೆಡ್ ಬೈನಾಕ್ಯುಲರ್‌ಗೆ ಕೆಂಪುಮಿಶ್ರಿತ ಬಣ್ಣವನ್ನು ಭೇದಿಸುವುದು ಸಾಧ್ಯವಾಗುವುದಿಲ್ಲ ಎನ್ನುವ ಕಾರಣಕ್ಕಾಗಿ ಬೆಳಕನ್ನು ಬಿಳಿ ಬಣ್ಣದಿಂದ ಕೆಂಪು ಬಣ್ಣಕ್ಕೆ ಬದಲಿಸಲಾಗುತ್ತಿತ್ತು. ತಾಂತ್ರಿಕವಾಗಿ ಅಮೆರಿಕ ತುಂಬ ಮುಂದಿದೆ. ಎಂತಹ ಕಗ್ಗತ್ತಲಿದ್ದರೂ ನಕ್ಷತ್ರದ ಬೆಳಕಿನಲ್ಲಿ ಜನರ ಚಲನವಲನವನ್ನು ಪರಿಶೀಲಿಸುವ ಉಪಕರಣಗಳನ್ನೂ ಅವರು ಹೊಂದಿದ್ದಾರೆ. ಸಂಪೂರ್ಣ ತಂತ್ರಜ್ಞಾನವನ್ನು ಅವಲಂಬಿಸಿದ ಸೇನೆ ಅವರದು. ಅಂದು ಬೆಳಗಿನ ಜಾವದ ತನಕ ಬಿಗುವಿನ ವಾತಾವರಣ ಇತ್ತು. ಸೇನೆ ಹೇಳಿದಂತೆ ಕೇಳುವುದು ಅನಿವಾರ್ಯ ಆಗಿತ್ತು. ಇಲ್ಲದಿದ್ದರೆ ನನ್ನ ಜೀವಕ್ಕೂ ತೊಂದರೆ, ಅವರಿಗೂ ತೊಂದರೆ. ಸ್ವಲ್ಪ ಇರುಸುಮುರುಸಾದರೂ ಮರುದಿನವೇ 'ಸೂಕ್ತ ವ್ಯಕ್ತಿಯಲ್ಲ' ಎಂದು ನನ್ನನ್ನು ಹಿಂದಕ್ಕೆ ಕಳಿಸಿಬಿಡುವ ಸಾಧ್ಯತೆಯಿತ್ತು. ಹಾಗಾಗಿ ಅವರ ನಿರ್ದೇಶನ ಪಾಲಿಸುವುದು ಅನಿವಾರ್ಯವಾಗಿತ್ತು. ಒತ್ತಡದ ಸಂದರ್ಭದಲ್ಲೂ ಒಂದೆರಡು ಫೋಟೊ ತೆಗೆಯಲು ಅವಕಾಶ ಸಿಕ್ಕಿತು. ಅದು ಅತ್ಯಂತ ಸ್ಮರಣೀಯ ಗಳಿಗೆ. ನಮ್ಮ ನಿದ್ದೆಗೆಡಿಸಿದ ಆ ಗುಂಪಿಗೆ ಅಮೆರಿಕ ಸೇನೆ ಎಚ್ಚರದಿಂದಿದೆ ಎನ್ನುವ ಸುಳಿವು ಸಿಕ್ಕಿರಬಹುದು. ಹಾಗಾಗಿ ಅದು ಬೆಳಗಿನ ಜಾವ ನಾಲ್ಕು ಗಂಟೆಗೆ ಬೇರೆಡೆಗೆ ಹೋಯಿತು ಎಂದು ಗೊತ್ತಾಯಿತು. ಬೆಳಿಗ್ಗೆ ಫಸ್ಟ್ ಲೈಟ್ ಅಂದರೆ ಸೂರ್ಯ ಇನ್ನೂ ಮೂಡಿರುವುದಿಲ್ಲ. ಮಸುಕು ಬೆಳಕು ಇಣುಕುವ ಹೊತ್ತಿಗೇ ನಾವು ಬಂದ ವಾಹನದಲ್ಲಿ ಮರಳಿದೆವು.

### ಊರು ಕೇರಿ ಬಿಟ್ಟು ತಿಂಗಳ ದಿನ

ಸಂಘರ್ಷದ ಸ್ಥಳದಲ್ಲಿ ನಮ್ಮ ಮೊಬೈಲ್ ಕೆಲಸ ಮಾಡುವುದಿಲ್ಲ ಎಂದು ತಿಳಿದಿದ್ದರೂ ಮೊಬೈಲ್